ಶ್ರೀ ಕೆ. ವಸಂತ ಬಂಗೇರ.—ಈ ಯೋಜನೆ ಮಂಜೂರಾಗಿ ಎಷ್ಟು ಸಮಯ ಆಯಿತು. ಈ ಕಾಮಗಾರಿ ಪ್ರಾರಂಭಿಸಲಿಕ್ಕೆ ಇಷ್ಟು ತಡ ಏತಕ್ಕೆ ಆಯಿತು ? ಇದರ ಒಟ್ಟು ಅಂದಾಜು ಮೊತ್ತ ಎಷ್ಟು ? ಈ ಕೆಲಸ ಪ್ರಾರಂಭವಾಗಿದ್ದು ಪ್ರಗತಿಯಲ್ಲಿದೆ ಎಂದು ತಿಳಿಸಿದ್ದೀರಿ. ಅಲ್ಲಿ ಯಾವ ಕೆಲಸವೂ ಪ್ರಾರಂಭವಾಗಿಲ್ಲ. ಈ ಅಲ್ಲಿ ಏನೇನು ಕೆಲಸ ನಡೆದಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಂಜೂರಾತಿ ದೊರೆತ ಸರ್ಕಾರಿ ಆಜ್ಞೆ ಸಂಖ್ಯೆ ೧೭–೧–೧೯೮೬ರ ಪ್ರಕಾರ ಬೆಳ್ತಂಗಡಿಯಲ್ಲಿ ಕೆಲಸ ನಡೆಯುತ್ತಿದೆ. ಇವನ್ನು ತೀವ್ರಗತಿಯಲ್ಲಿ ಮಾಡಿಸಬೇಕೆಂದು ತಾವು ಹೇಳಿ, ಮಾಡಿಸೋಣ.

ಶ್ರೀ ಕೆ. ವಸಂತ ಬಂಗೇರ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಅಲ್ಲಿ ಕೆಲಸ ನಡೆದಿದೆ ಎಂದು ಹೇಳಿದರು. ಅಲ್ಲಿ ಕೆಲಸ ನಡೆಯುತ್ತಿಲ್ಲ, ತೀವ್ರಗತಿಯಲ್ಲಿ ಮಾಡಿಸಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಮಾನ್ಯ ಸದಸ್ಯರು ಕೆಲಸ ನಡೆಯುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಅವರ ಹೇಳಿಕೆ ಪ್ರಕಾರ ತೆಗೆದುಕೊಂಡರೆ ನಾನು ಕೊಟ್ಟಿರತಕ್ಕ ಉತ್ತರ ತಪ್ಪಾಗುತ್ತದೆ. ಆದ್ದರಿಂದ ಆದರ ಬಗ್ಗೆ ನಾನು ವಿವರ ತರಿಸುತ್ತೇನೆ, ಸುಳ್ಳು ವರದಿ ಏನಾದರೂ ಕೊಟ್ಟಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ವಸಂತಬಂಗೇರ.—ಕಾಮಗಾರಿ ಮಂಜೂರಾಗಿ ಎಷ್ಟು ಸಮಯ ಆಯಿತು ? ಮಂಜೂರಾದ ಹಣ ಎಷ್ಟು ? ಎಷ್ಟು ಹಣ ಖರ್ಚಾಗಿದೆ ?

ಶ್ರೀ ಎ. ಲಕ್ಷ್ಮೀಸಾಗರ್.—ಮಂಜೂರಾದ ಹಣ ೮ ಲಕ್ಷ ರೂಪಾಯಿಗಳು. ಅದರಲ್ಲಿ ಜೂನ್ ಅಂತ್ಯದವರೆಗೆ ೬೪ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಕೆಲಸವನ್ನು ತ್ವರಿತಗತಿಯಲ್ಲಿ ಮಾಡಿಸುತ್ತೇವೆ.

ಶ್ರೀ ಕೆ. ವಸಂತ ಬಂಗೇರ.—ಬೆಳ್ತಂಗಡಿಯಲ್ಲಿ ಮಲವಿಸರ್ಜಿತ ಮತ್ತು ಕೊಳಕು ನೀರನ್ನು ಕೊಡುತ್ತಿದ್ದಾರೆ. ಎಷ್ಟು ದಿವಸಗಳ ಕಾಲ ಈ ನೀರನ್ನು ಜನರು ಕುಡಿಯಬೇಕು. ಎಷ್ಟು ದಿವಸದಲ್ಲಿ ಇದನ್ನು ಸುಧಾರಣೆ ಮಾಡಿ ಒಳ್ಳೆಯ ನೀರನ್ನು ಕೊಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಕೊಡತಕ್ಕ ನೀರನ್ನು ಕ್ಲೋರೋನೈಟ್ ಮಾಡಿ ಕೊಡುತ್ತಿದ್ದೇವೆ. ತೊಂದರೆ ಇದ್ದರೆ ಹೇಳಿ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ, ಈ ತಕ್ಷಣ ಆದೇಶ ಕೊಡುತ್ತೇನೆ.

ಶ್ರೀ ಕೆ. ವಸಂತ ಬಂಗೇರ.—ಬೆಳ್ತಂಗಡಿಯನ್ನು ಮಂಡಲ್ ಪಂಚಾಯತ್ ಎಂದು ಘೋಷಣೆ ಮಾಡಿದ್ದೀರಿ. ನನಗೆ ಉತ್ತರ ಕೊಡುತ್ತಿರುವವರು ಲಕ್ಷ್ಮೀಸಾಗರ್‌ರವರು. ಅದು ಅವರ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಂಡಲ್ ಪಂಚಾಯತ್ ಮಾನ್ಯ ನಜೀರ್ ಸಾಬ್ ಅವರಿಗೆ ಬರಬಹುದು. ಆದರೆ ನೀರು ಸರಬರಾಜು ಮಾಡತಕ್ಕ ಕೆಲಸವನ್ನು ನಗರ ನೀರು ಸರಬರಾಜು ಮಂಡಲಿಯವರು ಮಾಡುತ್ತಾರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು.

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಶಹಾಬಾದಿನಲ್ಲಿ ನೀರು ಸರಬರಾಜಿನ ಬಗ್ಗೆ

೫೨ (೨೦೭) ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

(ಅ) ಶಹಬಾದಿನಲ್ಲಿ ನೀರು ಸರಬರಾಜಿನ ಬಗ್ಗೆ ಒಂದು ಬೃಹತ್ ಯೋಜನೆ ತೆಗೆದುಕೊಂಡು ಅದನ್ನು ರಾಜ್ಯದ ಮುಖ್ಯ ಮಂತ್ರಿಗಳ ೧೯೮೪ರಲ್ಲಿ ಶಂಕುಸ್ಥಾಪನೆ ಮಾಡಿರುವುದು ಸರ್ಕಾರದವರ ಗಮನದಲ್ಲಿದೆಯೇ, ಹಾಗಿದ್ದಲ್ಲಿ, ತಗಲುವ ಒಟ್ಟು ವೆಚ್ಚವೆಷ್ಟು ?

(ಆ) ಈ ಯೋಜನೆಗೆ ಜೀವ ವಿಮಾ ಸಂಸ್ಥೆಯಿಂದ ಹಣವನ್ನು ಪಡೆಯಲಾಗಿದೆಯೇ, ಹಾಗಿದ್ದಲ್ಲಿ, ಇದುವರೆಗೆ ಅವರು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ, ಹಾಗೂ ಈ ಹಣಕ್ಕೆ ಎಷ್ಟು ಹಣವನ್ನು ಬಡ್ಡಿಯ ರೂಪದಲ್ಲಿ ಕೊಡಲಾಗಿದೆ?

(ಇ) ಈ ಯೋಜನೆ ಯಾವಾಗ ಪೂರ್ತಿಗೊಳ್ಳುವುದು ?

ಪ್ರೊ. ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

(ಅ) ಇದೆ. ಅಂದಾಜು ವೆಚ್ಚ ೮೫.೦೦ ಲಕ್ಷ ರೂಪಾಯಿಗಳು.

(ಆ) ಹೌದು. ಜೀವ ವಿಮಾ ಸಂಸ್ಥೆಯವರು ಈವರೆವಿಗೆ ಒಟ್ಟು ೨೮.೦೦ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ಈವರೆವಿಗೆ ಕೊಡಲಾಗಿರುವ ಬಡ್ಡಿ ಹಣದ ಮೊತ್ತ ರೂ. ೬,೫೫,೯೫೯ಗಳು.

(ಇ) ೧೯೮೮ರ ಡಿಸೆಂಬರ್ ಮಾಹೆಯೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಲು ನಿಯೋಜಿಸಲಾಗಿದೆ.

ಬೈಂದೂರು ಪುರಸಭೆಯನ್ನು ಮಂಡಲ ಪಂಚಾಯತ್ ಆಗಿ ಮಾರ್ಪಡಿಸುವ ಬಗ್ಗೆ

೫೩೨ (ಸಿ) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೭೧ರ ಖಾನೆಸುಮಾರಿಯಂತೆ ಕೇವಲ ಕೆಲವೇ ನೂರು ಜನಸಂಖ್ಯೆ ಅಧಿಕ ಇರುವ ಬೈಂದೂರು ಪುರಸಭೆಯನ್ನು ಮಂಡಲ ಪಂಚಾಯತ್ ಆಗಿ ಪರಿವರ್ತಿಸಲು ಪುರಸಭೆಯವರು ಹಾಗೂ ಸಾರ್ವಜನಿಕರು ಸರಕಾರವನ್ನು ಒತ್ತಾಯಿಸಿದ್ದು ಘಟದ ಸರಹದ್ದಿನ ಕಂಗ್ರಾಪುಗಳೇ ಜಾಸ್ತಿ ಇರುವ ಹಾಗೂ ಪರಿಶಿಷ್ಟಜಾತಿ ಬುಡಕಟ್ಟಿನ ಜನರು ಹೆಚ್ಚಾಗಿರುವ ಈ ಪ್ರದೇಶವನ್ನು ಮಂಡಲ ಪಂಚಾಯತ್ ಆಗಿ ಪರಿವರ್ತಿಸಲಾಗುವುದೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).-

ಅ) ಪ್ರಜಾಸಂಖ್ಯೆ ೧೦,೦೦೦ ಹಾಗೂ ೧೦,೦೦೦ ಕ್ಕಿಂತ ಕಡಿಮೆ ಇರುವ ಪುರಸಭೆಗಳನ್ನು ಮಂಡಲ ಪಂಚಾಯತಿಗಳಿಗಾಗಿ ಪರಿವರ್ತಿಸಲಾಗಿದೆ ಬೈಂದೂರು ಪುರಸಭೆಯ ಜನಸಂಖ್ಯೆ ೧೦,೩೫೪ ಇರುವುದರಿಂದ ಈ ಪುರಸಭೆಯನ್ನು ಮಂಡಲ ಪಂಚಾಯಿತಿಯನ್ನಾಗಿ ಪರಿವರ್ತಿಸಲಾಗಲಿಲ್ಲ. ಈ ಬಗ್ಗೆ ಸರ್ಕಾರಕ್ಕೆ ಯಾವ ಪ್ರಸ್ತಾವನೆಗಳು ಬಂದಿರುವುದಿಲ್ಲ. ಹಿಂದಿನ ಅಧಿವೇಶನದಲ್ಲಿ ಈ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನಿಸಲಾಗಿದ್ದು ಉತ್ತರವನ್ನು ಸಹ ನೀಡಲಾಗಿತ್ತು.

ಆ) ಮೇಲಿನ 'ಅ' ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ಇರುವ ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಯು ಮಂಜೂರಾಗುವ ಬಗ್ಗೆ

೫೪೪ (೫) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

೧. ಕರ್ನಾಟಕ ರಾಜ್ಯದಲ್ಲಿ ಇರುವ ಹಳ್ಳಿಗಳ ಸಂಖ್ಯೆ ಮತ್ತು ಅವುಗಳಲ್ಲಿ ಎಷ್ಟು ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಗಳು ಮಂಜೂರಾಗಿವೆ ?

೨. ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗಳು ಎಷ್ಟು ಮಂಜೂರಾಗಿವೆ ? (ಜಿಲ್ಲಾವಾರು ವಿವರಗಳನ್ನು ಕೊಡಬಹುದು)